**ದಿನಾಂಕ: 19.02.2022 ರಂದು ಬೆಳಗ್ಗೆ 11:00 ಗಂಟೆಗೆ ವಾರ್ಡ್ ಸಂಖ್ಯೆ 166 ಕರೀಸಂದ್ರ ವಾರ್ಡ್ ಕಛೇರಿಯಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡುವಳಿಗಳು.**

***ಹಾಜರಿದ್ದ ಅಧಿಕಾರಿಗಳು:-***

1. ಶ್ರೀ. ಪ್ರದೀಪ್ ರಾಥೋಡ್ – ಅಧ್ಯಕ್ಷರು ಮತ್ತು ನೋಡೆಲ್ ಅಧಿಕಾರಿಗಳು.
2. ಶ್ರೀ. ಯತೀಶ್. ಎ.ಜೆ – ಸಹಾಯಕ ಅಭಿಯಂತರರು ಮತ್ತು ಸಂಚಾಲಕರು (ವಾರ್ಡ್ 166 ಕರೀಸಂದ್ರ)
3. ಶ್ರೀಮತಿ. ಲೀಲಾವತಿ – ಕಂದಾಯ ವಸೂಲಿಗಾರರು (ವಾರ್ಡ್ 166 ಕರೀಸಂದ್ರ)
4. ಶ್ರೀ. ರುದ್ರೇಶ್ – ಸಹಾಯಕ ಅಭಿಯಂತರರು (ಬೆಸ್ಕಾಂ)
5. ಶ್ರೀ. ನರಸಿಂಹಲು – ಹಿ.ಆ.ಪ– (ವಾರ್ಡ್ 166 ಕರೀಸಂದ್ರ)
6. ಶ್ರೀ. ಬಾಬು – ಕಿ.ಆ.ಪ (ವಾರ್ಡ್ 166 ಕರೀಸಂದ್ರ)
7. ಟ್ರಾಫಿಕ್ ಪೋಲೀಸ್ ಇಲಾಖೆ ಜಯನಗರ/ ಬನಶಂಕರಿ ಹಾಗೂ ಕಾನೂನು ಮತ್ತು ಸುವ್ಯವಸ್ಥೆಯ ಪೊಲೀಸ್ ಅಧಿಕಾರಿಗಳು.
8. 7ನೇ ಬ್ಲಾಕ್ ಜಯನಗರ ಮತ್ತು ಕಾವೇರಿನಗರ ಸಂಘ ಸಂಸ್ಥೆಯ ಅಧ್ಯಕ್ಷರು ಮತ್ತು ಕಾರ್ಯದರ್ಶಿಗಳು.

ಮೇಲೆ ಹಾಜರಿದ್ದ ಅಧಿಕಾರಿಗಳು ಹಾಗೂ ಸಮಿತಿ ಸದಸ್ಯರ ಸಮ್ಮುಖದಲ್ಲಿ ವಾರ್ಡ್ ಸಂಖ್ಯೆ 166 ರ ಕಾರ್ಯದರ್ಶಿಗಳು ಹಾಗೂ ಸಹಾಯಕ ಅಭಿಯಂತರರು ರವರು ಸಭೆಯನ್ನುದ್ದೇಶಿಸಿ ಮಾತನಾಡುತ್ತಾ, ಸಭೆ ಸೇರಿರುವ ಉದ್ದೇಶ ಮತ್ತು ಸಭೆಯ ಮಹತ್ವವನ್ನು ಸದಸ್ಯರ ಮುಖ ಪರಿಚಯದೊಂದಿಗೆ ವಿವರಿಸುತ್ತಾ, ಹಾಜರಿದ್ದ ಸದಸ್ಯರಿಗೆ ಹಾಗೂ ಅಧಿಕಾರಿಗಳಿಗೆ ಸ್ವಾಗತ ಕೋರಿದರು.

9ನೇ ಮುಖ್ಯರಸ್ತೆಯಲ್ಲಿ ಬಿಡಬ್ಲ್ಯೂಎಸ್ಎಸ್‌ಬಿ ಮ್ಯಾನ್ ಹೋಲ್ ಹುಕ್ಕಿ ಹರಿಯುತ್ತಿರುವ ಬಗ್ಗೆ ಸಾರ್ವಜನಿಕರು ದೂರು ನೀಡಲಾಗಿ ಈ ಕುರಿತು ತುರ್ತಾಗಿ ನಿರ್ವಹಿಸಲು ಬಿಡಬ್ಲ್ಯೂಎಸ್ಎಸ್‌ಬಿ ಅಧಿಕಾರಿ ರವರಿಗೆ ಸೂಚಿಸಲಾಯಿತು.

ವಾರ್ಡ್‌ನ ಇಂಡಸ್ಟ್ರಿಯಲ್ ಭಾಗದ ಕೆಲವು ಸ್ಥಳಗಳಲ್ಲಿ ಘನತ್ಯಾಜ್ಯ ಸಂಗ್ರಹಣೆ ಹಾಗೂ ಬೆಸ್ಕಾಂ ಟ್ರಾನ್ಸ್‌ಫಾರಂ ಸುತ್ತಾಮುತ್ತಾ ಸ್ವಚ್ಛತೆ ಕಾಪಾಡಲು ಬೆಸ್ಕಾಂ ಅಧಿಕಾರಿಗಳಿಗೆ ಹಾಗೂ ಘನತ್ಯಾಜ್ಯ ನಿರ್ವಹಣೆ ಅಧಿಕಾರಿಗಳಿಗೆ ಸೂಚಿಸಲಾಯಿತು.

ರಜತಾದ್ರಿ ಹೋಟೆಲ್, ಅಡಿಗಾಸ್ ಹೋಟೆಲ್ ಮತ್ತು ಪೋಸ್ಟ್ ಆಫೀಸ್ ಹತ್ತಿರ ರಸ್ತೆಗಳಲ್ಲಿ ವಾಹನಗಳನ್ನು ಪಾರ್ಕಿಂಗ್ ಮಾಡುತ್ತಿರುವುದರಿಂದ ರಸ್ತೆಗಳಲ್ಲಿ ಓಡಾಡಲು ತುಂಬಾ ತೊಂದರೆಯಾಗಿರುತ್ತದೆ ಎಂದು ವಾರ್ಡ್ ಸಭೆಯಲ್ಲಿ ಸಾರ್ವಜನಿಕರು ತಿಳಿಸಿರುತ್ತಾರೆ. ಆದುದ್ದರಿಂದ ಈ ರಸ್ತೆಗಳಲ್ಲಿ ವಾರಕ್ಕೊಮ್ಮೆ ಒಂದು ಬದಿಗೆ ಪಾರ್ಕಿಂಗ್ ವ್ಯವಸ್ಥೆ ಮಾಡುವ ಬಗ್ಗೆ ಕ್ರಮ ಕೈಗೊಳ್ಳಲು ವಾರ್ಡಿನ ಅಧ್ಯಕ್ಷರು ಟ್ರಾಫಿಕ್ ಪೊಲೀಸ್ ರವರಿಗೆ ತಿಳಿಸಿರುತ್ತಾರೆ.

ಪು.ತಿ.ನೋ

ವಾರ್ಡ್ ವ್ಯಾಪ್ತಿಯಲ್ಲಿ ಕಳೆದ 15 ದಿನಗಳಿಂದ ಸ್ವೀಕೃತವಾಗಿರುವ ಅಂತರ್ಜಾಲ ದೂರುಗಳು, ಲಿಖಿತ ದೂರುಗಳು ಹಾಗೂ ಸಾರ್ವಜನಿಕರ ಮೌಖಿಕ ದೂರುಗಳು ಹಾಗೂ ಇನ್ನಿತರೆ ಸ್ಥಳೀಯ ಸಂಸ್ಥೆಗಳಿಂದ ದೂರುಗಳನ್ನು ಕಾಲಕಾಲಕ್ಕೆ ಪರಿಹಾರ ಮಾಡಲಾಗಿರುವ ಬಗ್ಗೆ ಅಧ್ಯಕ್ಷರು ಹಾಗೂ ನೋಡೆಲ್ ಅಧಿಕಾರಿಗಳಿಗೆ ವಿವರಿಸಲಾಯಿತು.

ಮೇಲಿನ ವಿಷಯಗಳ ಬಗ್ಗೆ ಶ್ರೀ. ಯತೀಶ್. ಎ.ಜೆ ರವರು ಮಾತನಾಡಿ, ವಾರ್ಡ್ ವ್ಯಾಪ್ತಿಯಲ್ಲಿನ ಮೂಲಭೂತ ಸೌಕರ್ಯಗಳಾದ ರಸ್ತೆಗುಂಡಿ ಮುಚ್ಚುವಿಕೆ, ಕಟ್ಟಡ ತ್ಯಾಜ್ಯ ವಿಲೇವಾರಿ, ಘನತ್ಯಾಜ್ಯ ವಿಲೇವಾರಿ, ಬೆಸ್ಕಾಂ ಸಂಬಂಧಿತ, ಜಲಮಂಡಳಿ ಸಂಬಂಧಿತ, ಆರೋಗ್ಯ ಇಲಾಖೆ ಹಾಗೂ ಇನ್ನಿತರೆ ಸೌಲಭ್ಯಗಳಿಗೆ ಸಂಬಂಧಿಸಿದಂತೆ ಸಮರ್ಪಕ ಕಾರ್ಯನಿರ್ವಹಣೆಯ ಬಗ್ಗೆ ಆಯಾ ಇಲಾಖೆಗಳ ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಸಮನ್ವಯ ಸಾಧಿಸಿ ಸೂಕ್ತ ಕ್ರಮ ಕೈಗೊಳ್ಳಲಾಗುವುದೆಂದು ಸದಸ್ಯರಿಗೆ ಮತ್ತು ಅಧ್ಯಕ್ಷರಿಗೆ ವಿವರಿಸಿದರು.

ಈ ಎಲ್ಲಾ ವಿಷಯದ ಬಗ್ಗೆ ಚರ್ಚಿಸಲಾಗಿ ಸೂಕ್ತ ಕ್ರಮ ಕೈಗೊಳ್ಳುವ ನಿರೀಕ್ಷಣೆಯೊಂದಿಗೆ ಸಮಿತಿಯ ಅಧ್ಯಕ್ಷರು ಹಾಗೂ ನೋಡೆಲ್ ಅಧಿಕಾರಿಗಳಾದ ಶ್ರೀ. ಪ್ರದೀಪ್ ರಾಥೋಡ್ ರವರು ಎಲ್ಲರಿಗೂ ವಂದನೆಗಳನ್ನು ಕೋರುತ್ತಾ ಸಭೆಯನ್ನು ಮುಕ್ತಾಯಗೊಳಿಸಲಾಯಿತು.



ಸದಸ್ಯ ಕಾರ್ಯದರ್ಶಿ ಹಾಗೂ
ಸಹಾಯಕ ಅಭಿಯಂತರರು
ವಾರ್ಡ್ ಸಂಖ್ಯೆ 166